2018 ಕ.ತೀ.ವ. 798

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ

## ಕಸ್ತೂರಿ –ವಿರುದ್ಧ– ಸುಭಾಸ್*

ದಂಡ ಪ್ರಕ್ರಿಯಾ ಸಂಹಿತೆಯ 401ನೇ ಪ್ರಕರಣದೊಂದಿಗೆ ಓದಲಾದ 397ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಕ್ರಿಮಿನಲ್ ಪುನರವಲೋಕನ ಅರ್ಜಿ.

ಗೃಹ ಸಂಬಂಧಿ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005ರ ಅಡಿಯಲ್ಲಿನ 12ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅರ್ಜಿಗೆ ಸಂಬಂಧಪಟ್ಟಂತೆ ಅಧಿವಿಚಾರಣಾ ನ್ಯಾಯಾಲಯವು ನೀಡಿದ ತೀರ್ಪನ್ನು ಪ್ರಶ್ನಿಸಿ ಪತ್ನಿ/ಪತಿ ಇಬ್ಬರೂ ಸಲ್ಲಿಸಿರುವ ಕ್ರಿಮಿನಲ್ ಪುನರವಲೋಕನ ಅರ್ಜಿಯಾಗಿದೆ.

ಅಧಿನಿಯಮದ 3ನೇ ಪ್ರಕರಣದಡಿಯಲ್ಲಿನ 'ಗೃಹ ಸಂಬಂಧಿ ಹಿಂಸೆ'ಯು, ಇತರೆ ವಿಷಯಗಳೊಟ್ಟಿಗೆ 'ಹಣಕಾಸಿನ ದೌರ್ಜನ್ಯದ' ಆಯಾಮವನ್ನು ಸಹ ಪರಿಗಣಿಸುತ್ತದೆ. ಪ್ರಯೋಜನ ಪಡೆದುಕೊಳ್ಳಬಹುದಾಗಿದ್ದಂಥ ಬಾಧಿತ ವ್ಯಕ್ತಿಯ ಜೀವನ ನಿರ್ವಹಣೆಯ ಬಗೆಗೆ ನಿರ್ಲಕ್ಷ್ಯ ತೋರುವ ಪತಿಯ ಕರ್ತವ್ಯಲೋಪವು ಅಧಿನಿಯಮದ 3ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಬರುತ್ತದೆ. ಪತಿಯ ಹೊಣೆಗಾರಿಕೆ ವೈವಾಹಿಕ ಜೀವನದುದ್ದಕ್ಕೂ ಮುಂದುವರೆಯುತ್ತದೆ. ಹಾಗಾಗಿ ಜೀವನ

* ಕ್ರಿಮಿನಲ್ ಪುನರವಲೋಕನ ಅರ್ಜಿ ಸಂಖ್ಯೆ: 539/2017 ಇದರೊಂದಿಗೆ ಇತರೆ, ದಿನಾಂಕ: 3ನೇ ಆಗಸ್ಟ್, 2017.

ನಿರ್ವಹಣೆಗೆ ಹಲವಾರು ವರ್ಷಗಳ ಕಾಲ ಹಣವನ್ನು ಪತ್ನಿ ಕ್ಲೇಮು ಮಾಡಿರುವುದಿಲ್ಲವೆಂಬ ಕಾರಣಕ್ಕೆ ಪತಿಗೆ ವಿನಾಯಿತಿಯಿರುವುದಿಲ್ಲ. ಅಲ್ಲದೆ ಈತ ತನ್ನ ವಿವಾಹವು ಅಸ್ತಿತ್ವದಲ್ಲಿರುವಾಗಲೇ ಮತ್ತೊಬ್ಬ ಮಹಿಳೆಯನ್ನು ವಿವಾಹವಾಗಿ ಮಕ್ಕಳನ್ನು ಪಡೆದುಕೊಂಡಿರುವುದು. ಅಧಿನಿಯಮದ 3(ಎ) ಪ್ರಕರಣವು ಪರಿಭಾಷಿಸಿರುವ ಭಾವನಾತ್ಮಕ ದೌರ್ಜನ್ಯಕ್ಕೆ ಕಾರಣವಾಗಿ, ಬಾಧಿತ ವ್ಯಕ್ತಿಯ ಮಾನಸಿಕ ಹಾಗೂ ದೈಹಿಕ ಸ್ಥಿತಿಯನ್ನು ಅಪಾಯಕ್ಕೆ ದೂಡಿರುತ್ತದೆಯೆಂಬುದು ವಾಸ್ತವ ವಿಚಾರವಾಗಿರುತ್ತದೆ. ಇದು ಅಧಿನಿಯಮದ 3(ಎ) ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಬರುವ ಗೃಹಸಂಬಂಧಿ ಹಿಂಸೆಯ ಮತ್ತೊಂದು ರೀತಿಯದಾಗಿರುತ್ತದೆ. ವಿಷಯದ ಈ ಹಿನ್ನಲೆಯಲ್ಲಿ ಅರ್ಜಿದಾರನು ಗೃಹಸಂಬಂಧಿ ಹಿಂಸೆಯ ಅಪರಾಧ'ದ ದೋಷಿಯಾಗಿದ್ದು, ತನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಕಾಲ ಪರಿಮಿತಿಯು ಅವಕಾಶ ನೀಡುವುದಿಲ್ಲ. ಆದ್ದರಿಂದ, ಪತ್ನಿಯು ಅಧಿನಿಯಮದಡಿ ರಕ್ಷಣೆಗೆ ಹಕ್ಕುಳ್ಳವಳಾಗಿರುತ್ತಾಳೆ ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಅನುಮೋದಿಸಿದೆ ಹಾಗೂ ಈ ಅರ್ಜಿಗಳು ಪುನರೀಕ್ಷಣಾ ವ್ಯಾಪ್ತಿಗೆ ಬರುವುದಿಲ್ಲವೆಂದು ವಜಾಗೊಳಸಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು:* *ಪ್ಯಾರಾಗಳಲ್ಲಿ*

1. *(2011) 12 ಎಸ್‌ಸಿಸಿ 588*
*ಇಂದ್ರಜಿತ್ ಸಿಂಗ್ ಗ್ರೇವಾಲ್ –ವಿರುದ್ಧ–*
*ಪಂಜಾಬ್ ರಾಜ್ಯ ಹಾಗೂ ಮತ್ತೊಬ್ಬರು* *(ಉಲ್ಲೇ) 11*
2. *2012 ಎಐಆರ್ ಎಸ್‌ಸಿಡಬ್ಲ್ಯು 1515*
*ವಿ.ಡಿ. ಭನೋಟ್ –ವಿರುದ್ಧ– ಸವಿತ ಭನೋಟ್* *(ಉಲ್ಲೇ) 12*

ಅರ್ಜಿದಾರರ ಪರ : ಶ್ರೀ ಜಗದೀಶ್ ಶಾಸ್ತ್ರಿ, ವಕೀಲರು;
ಪ್ರತ್ಯರ್ಜಿದಾರರ ಪರ : ಶ್ರೀ ಎಸ್.ಟಿ. ಬಿಕ್ಕಣ್ಣವರ್, ಹೆಚ್‌ಸಿಜಿಪಿ.

## ಆದೇಶ

**ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ:**

ಈ ಅರ್ಜಿಗಳಲ್ಲಿ, ಗೃಹ ಸಂಬಂಧಿ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 (ಸಂಕ್ಷಿಪ್ತತೆಗಾಗಿ 'ಅಧಿನಿಯಮ' ಎಂದು ಕರೆಯಲಾಗಿರುತ್ತದೆ) ರಡಿಯಲ್ಲಿನ ನಡಾವಳಿಗಳ ಸಂಬಂಧದಲ್ಲಿ ಅಧಿವಿಚಾರಣಾ ನ್ಯಾಯಾಲಯ ಅಲ್ಲದೆ ಅಪೀಲು ನ್ಯಾಯಾಲಯವು ಹೊರಡಿಸಿದ ಆದೇಶವನ್ನು ಪ್ರಶ್ನಿಸಲಾಗಿದೆ.

2. ಕ್ರಿಮಿನಲ್ ಪುನರವಲೋಕನ ಅರ್ಜಿ ಸಂಖ್ಯೆ 195/2007 ರಲ್ಲಿನ ಪತಿ/ಪುನರವಲೋಕನ ಅರ್ಜಿಯ ಅರ್ಜಿದಾರನು ಅಧಿನಿಯಮದಡಿಯಲ್ಲಿನ ಅರ್ಜಿಯ ಸದರಿ ಊರ್ಜಿತತ್ವವನ್ನು ಪ್ರಶ್ನಿಸಿರುವುದಲ್ಲದೆ, ಕ್ರಿಮಿನಲ್ ಪುನರವಲೋಕನ ಅರ್ಜಿ ಸಂಖ್ಯೆ 539/2017ರ ಪತ್ನಿ/ಪುನರವಲೋಕನ ಅರ್ಜಿದಾರರ ಹೆಸರಿನಲ್ಲಿ ಐತೀರ್ಪು ನೀಡಿದ ಜೀವನಾಂಶದ ಹಾಗೂ ಪರಿಹಾರದ ಪ್ರಮಾಣದಿಂದ ಬಾಧಿತನಾಗಿದ್ದೇನೆಂದು ಸದರಿ ವಿಷಯವನ್ನು ಪ್ರಶ್ನಿಸಿರುತ್ತಾನೆ. ಅಲ್ಲದೆ, ಪತ್ನಿಯು ಅಧಿವಿಚಾರಣಾ ನ್ಯಾಯಾಲಯದಲ್ಲಿ ಆಕೆಯ ಹೆಸರಿನಲ್ಲಿ ಆದೇಶಿಸಿದ ಜೀವನಾಂಶ ಹಾಗೂ ಪರಿಹಾರವನ್ನು ಕಡಿತ ಮಾಡಿರುವ ಅಧೀನ ಅಪೀಲು ನ್ಯಾಯಾಲಯದ ಸದರಿ ಆದೇಶವನ್ನು ಪ್ರಶ್ನಿಸಿರುತ್ತಾಳೆ.

3. ಸಂಕ್ಷಿಪ್ತವಾಗಿ ಹೇಳುವುದಾದರೆ, ಪತ್ನಿಯು ಹಲವಾರು ಪರಿಹಾರಗಳಿಗಾಗಿ ಅಧಿನಿಯಮದ 12ನೇ ಪ್ರಕರಣದಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾಳೆ. ಈಕೆ, ತನ್ನನ್ನು ತನ್ನ ಪತಿ ಸರಿಯಾಗಿ ನಡೆಸಿಕೊಳ್ಳದೆ, ತನ್ನ ತಂದೆ–ತಾಯಿಯರಿಂದ ಹಣ ತರುವಂತೆ ಕಿರುಕುಳ ನೀಡುತ್ತಿದ್ದ, ಕುಟುಂಬ ನಿರ್ವಹಣೆ ಮಾಡದೆ ತನ್ನನ್ನು

ಸಂಪೂರ್ಣವಾಗಿ ನಿರ್ಲಕ್ಷಿಸಿ, ವಿಚ್ಛೇದನ ನೀಡುವಂತೆ ಒತ್ತಾಯಿಸುತ್ತಾ ಚಿತ್ರಹಿಂಸೆ ನೀಡುತ್ತಿದ್ದನೆಂಬುದು ವಾದಿಸಿರುತ್ತಾಳೆ. ತನ್ನ ಪತಿಗೆ ಬಸಮ್ಮ ಎಂಬ ಮಹಿಳೆಯೊಂದಿಗೆ ವಿವಾಹೇತರ ಸಂಬಂಧವಿತ್ತೆಂದೂ ಸಹ ವಾದಿಸಿರುತ್ತಾಳೆ. ಈತ ರೆವಿನ್ಯೂ ಇನ್ಸ್‌ಪೆಕ್ಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ಮಾಸಿಕ ರೂ. 30,000/- ಗಳಷ್ಟು ಆದಾಯವಿದ್ದು, ಆತನ ಕೌಟುಂಬಿಕ ಆಸ್ತಿಯಿಂದಲೂ ಸಹ ಆದಾಯವನ್ನು ಪಡೆದುಕೊಳ್ಳುತ್ತಿರುತ್ತಾನೆಂದೂ ವಾದಿಸಿ, ತನಗೆ ತನ್ನ ಜೀವನ ನಿರ್ವಹಣೆಗೆ ಯಾವುದೇ ಮೂಲಾಧಾರವಿಲ್ಲದೆ, ತನ್ನ ಮಗಳು ಹಾಗೂ ಅಳಿಯ ನನಗೆ ನೆರವಾಗುತ್ತಿದ್ದು, ತನಗೆ 15,000/- ರೂ.ಗಳ ನೆರವಿನ ಅಗತ್ಯವಿರುತ್ತದೆಂದು ಕೋರಿರುತ್ತಾಳೆ.

4. ಪತಿಯ ಸದರಿ ಅರ್ಜಿಯನ್ನು ಪ್ರಶ್ನಿಸಿ, ಅರ್ಜಿಯಲ್ಲಿನ ವಾದಗಳನ್ನು ನಿರಾಕರಿಸಿ, ಬೆಂಗಳೂರಿನಲ್ಲಿರುವ ತನ್ನ ಮಗಳ ಮನೆಗೆ ತಾನೇ ಸ್ವಂತ ನಿರ್ಧಾರದಿಂದ ತೆರಳಿದ್ದಾಳೆಂದು ವಾದಿಸಿರುತ್ತಾನೆ.

5. ಪಕ್ಷಕಾರರು ಅಧಿವಿಚಾರಣೆಯಲ್ಲಿ ಪಾಲ್ಗೊಂಡು ತಮ್ಮನ್ನು ಅನುಕ್ರಮವಾಗಿ ಪಿ.ಡಬ್ಲ್ಯೂ-1 ಹಾಗೂ ಆರ್‌ಡಬ್ಲ್ಯೂ-1 ಎಂಬುದಾಗಿ ನಮೂದಿಸಿಕೊಂಡು, ನಿಶಾನೆ ಪಿ1 ರಿಂದ ಪಿ6ರ ವರೆಗಿನ ದಸ್ತಾವೇಜುಗಳನ್ನು ಪತ್ನಿಗೆ ಸಂಬಂಧಿಸಿದಂತೆ ಗುರುತು ಮಾಡಲಾಗಿದ್ದು, ನಿಶಾನೆ ಆರ್.1 ಹಾಗೂ ಆರ್.2 ಎಂಬ ದಸ್ತಾವೇಜುಗಳನ್ನು ಪತಿಯ ಸಂಬಂಧದಲ್ಲಿ ಪರೀಕ್ಷಿಸಲಾಗಿರುತ್ತದೆ.

6. ವಿಷಯವನ್ನು ಸಮಗ್ರವಾಗಿ ಪರಿಶೀಲಿಸಿದ ಮೇಲೆ, ಮಾನ್ಯ ಮ್ಯಾಜಿಸ್ಟ್ರೇಟರು ಅರ್ಜಿಯನ್ನು ಅಂಗೀಕರಿಸಿ, ಪತ್ನಿಯ ಹೆಸರಿನಲ್ಲಿ ಆಕೆಯ ಜೀವನಾಂಶಕ್ಕಾಗಿ ಪ್ರತೀ ತಿಂಗಳು 10,000/- ರೂ.ಗಳನ್ನು ಆಕೆಯ ಜೀವಿತಾವಧಿಯವರೆಗೂ ಅಥವಾ ಆಕೆ ಮರು ಮದುವೆಯಾಗುವವರೆಗೂ ನೀಡಬೇಕೆಂದು ಹಾಗೂ ಆಕೆ ಅನುಭವಿಸಿದ ಮಾನಸಿಕ, ಭಾವನಾತ್ಮಕ ಹಾಗೂ ಆರ್ಥಿಕ ಹಿಂಸೆಗಳಿಗೆ ಸಂಬಂಧಿಸಿದಂತೆ ಪರಿಹಾರವಾಗಿ 1,00,000/- ರೂ.ಗಳನ್ನು ಆದೇಶಿಸಲಾಗಿರುತ್ತದೆ. ಅಲ್ಲದೆ ಪತಿಗೆ,

ಆಕೆಗೆ ಪ್ರತ್ಯೇಕ ಮನೆ ಮಾಡಿಕೊಡುವಂತೆ ಹಾಗೂ 1,000/– ರೂ.ಗಳ ವ್ಯಾಜ್ಯ ವೆಚ್ಚವನ್ನು ನೀಡುವಂತೆ ಸಹ ನಿರ್ದೇಶಿಸಲಾಗಿರುತ್ತದೆ.

7. ಪತಿಯು ಸಲ್ಲಿಸಿದ ಅಪೀಲಿನಲ್ಲಿ, ಅಧೀನ ಅಪೀಲು ನ್ಯಾಯಾಲಯವು ಮ್ಯಾಜಿಸ್ಟ್ರೇಟರ ಆದೇಶವನ್ನು ಮಾರ್ಪಾಟುಗೊಳಿಸಿರುತ್ತದೆ. ಮಾಸಿಕ ಜೀವನಾಂಶದ ಮೊಬಲಗನ್ನು 10,000/– ದಿಂದ 5,000/–ಕ್ಕೆ ಇಳಿಸಿ, ಪರಿಹಾರದ ಮೊಬಲಗನ್ನು 50,000/–ಕ್ಕೆ ಕಡಿತಗೊಳಿಸಿರುತ್ತದೆ.

8. ಅರ್ಜಿದಾರ/ಪತಿಯು ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಎಸ್.ಟಿ. ಬಿಕ್ಕಣ್ಣನವರ್, ಮ್ಯಾಜಿಸ್ಟ್ರೇಟರು, ಅಧಿನಿಯಮದ 12ನೇ ಪ್ರಕರಣದ ಪರಂತುಕದಲ್ಲಿ ಉಪಬಂಧಿಸಲಾದಂತೆ ಸಂರಕ್ಷಣಾಧಿಕಾರಿ ಅಥವಾ ಸೇವೆಯನ್ನು ಒದಗಿಸುವವರ ವರದಿಯನ್ನು ತರಿಸಿಕೊಳ್ಳದೆ ಅಧಿನಿಯಮದ 12ನೇ ಪ್ರಕರಣದಡಿಯಲ್ಲಿ ಆದೇಶವನ್ನು ಹೊರಡಿಸಿರುತ್ತಾರೆಂದು ನಿವೇದಿಸಿಕೊಂಡಿರುತ್ತಾರೆ. ಅಪೀಲು ನ್ಯಾಯಾಲಯವು, ಆಜ್ಞಾಪಕ ಉಪಬಂಧವನ್ನು ಅನುಸರಿಸಲು ವಿಷಯವನ್ನು ಹಿಂದಕ್ಕೆ ತರಿಸಿಕೊಳ್ಳಲೇಬೇಕು. ಪತ್ನಿಯು, ಪತಿಯೊಂದಿಗೆ ಒಂದೇ ಸೂರಿನಲ್ಲಿರುತ್ತೇನೆಂಬ ವಿಷಯವನ್ನು ಸುಸ್ಥಾಪಿಸಲು ವಿಫಲಳಾಗಿರುತ್ತಾಳೆ. ಆ ಕಾರಣದಿಂದಲೇ ಆಕೆಯ ಅರ್ಜಿಯು, ಅಧಿನಿಯಮದ 2(ಎ) ಹಾಗೂ (ಎಫ್)ನ ಉಪಬಂಧಗಳ ಮೇರೆಗೆ ಊರ್ಜಿತವಾಗಿರುವುದಿಲ್ಲ. ಅಧಿನಿಯಮದ 3ನೇ ಪ್ರಕರಣದಡಿಯಲ್ಲಿ ಪರಿಭಾಷಿಸಲಾದಂತೆ ಯಾವುದೇ "ಕಿರುಕುಳ/ಸರಿಯಾಗಿ ನಡೆಸಿಕೊಳ್ಳದಿರುವುದು ಅಥವಾ" ಕೌಟುಂಬಿಕ ಹಿಂಸೆಯಿಲ್ಲದಿರುವುದರಿಂದ ಅರ್ಜಿ ಸಲ್ಲಿಸಲು ವ್ಯಾಜ್ಯ ಕಾರಣವೇ ಇರುವುದಿಲ್ಲ. ವಿವಾಹವಾದ ತರುವಾಯ ಪತ್ನಿಯು ಗಂಡನ ಮನೆಯಲ್ಲಿ ಕೇವಲ 5–6 ತಿಂಗಳುಗಳ ಕಾಲವಷ್ಟೆ ಇದ್ದಳು. ಆ ತರುವಾಯ ತಾನೇ ಸ್ವತಃ ಗಂಡನನ್ನು ಬಿಟ್ಟು ಬಂದು, ಆಕೆಯ ತಂದೆ–ತಾಯಿಯರೊಂದಿಗೆ ವಾಸಿಸಲು ಆರಂಭಿಸಿರುತ್ತಾಳೆ. ಈಕೆ ತನ್ನ ಪತಿಯ ಎರಡನೇ ಮದುವೆಗೆ ಒಪ್ಪಿಕೊಂಡು, ಸಮ್ಮತಿಸಿದ್ದಳು. 8 ವರ್ಷಗಳ ಕಾಲ ಕಾದ ತರುವಾಯ, ಆಕೆಯ ಸಮ್ಮತಿಯೊಂದಿಗೆ ಎರಡನೇ ಪತ್ನಿಯನ್ನು ಮದುವೆಯಾಗಿರುತ್ತಾನೆ. ಸುಮಾರು 30 ವರ್ಷಗಳ

ಕಾಲ ಆತನ ಎರಡನೇ ಮದುವೆಯ ಬಗ್ಗೆ ಯಾವುದೇ ಆಕ್ಷೇಪಣೆ ಇರಲಿಲ್ಲ. 30 ವರ್ಷಗಳ ತರುವಾಯು ಸಲ್ಲಿಸಿದ ಅರ್ಜಿಯನ್ನು ಕಾಲಪರಿಮಿತಿಯಿಂದ ನಿಷೇಧಿಸಿರುತ್ತದೆ. ತನ್ನ ಮಗಳನ್ನು ಬೆಳೆಸಿ, ಮದುವೆ ಮಾಡಿದಂಥ ಈ ವ್ಯಕ್ತಿ ಎರಡನೇ ಮದುವೆಯಿಂದ ಈತ ಹೊಂದಿರುವ ಮಕ್ಕಳನ್ನು ಇವನು ಸಾಕಬೇಕಾಗಿದೆ, ಇವರ ಪಿಂಚಣಿ ಮೊಬಲಗು ಮಾಸಿಕ ಕೇವಲ 6,104 ರೂ ಗಳಾಗಿರುತ್ತವೆ. ಅಧೀನ ನ್ಯಾಯಾಲಯಗಳು ಆಕೆಯ ಅರ್ಜಿಯನ್ನು ತಿರಸ್ಕರಿಸಲೇಬೇಕಾಗಿರುತ್ತದೆ.

9. ಇದಕ್ಕೆ ಉತ್ತರವಾಗಿ, ಕ್ರಿಮಿನಲ್ ಪುನರವಲೋಕನ ಅರ್ಜಿ ಸಂಖ್ಯೆ 539/2017ರ ಅರ್ಜಿದಾರ/ಪತ್ನಿಯ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಶ್ರೀ ಜಗದೀಶ್ ಶಾಸ್ತ್ರಿಯವರು, ತನ್ನ ಕಕ್ಷಿದಾರಳ ಪತಿಯು ಪ್ರತೀ ಮಾಸಿಕ 9,400/– ರೂ.ಗಳ ಪಿಂಚಣಿಯನ್ನು 16,23,434 ರೂ.ಗಳಷ್ಟು ನಿವೃತ್ತ ಸೌಲಭ್ಯಗಳನ್ನು ಪಡೆದಿದ್ದು, ಅಧೀನ ಅಪೀಲು ನ್ಯಾಯಾಲಯವು, ಆತನ ಆದಾಯದ ಇತರೆ ಮೂಲಗಳನ್ನು ಪರಿಗಣಿಸದೆ, ಸಿಂಧುವಾದ ಕಾರಣಗಳಿಲ್ಲದೆ ಅಧಿವಿಚಾರಣಾ ನ್ಯಾಯಾಲಯವು ಜೀವನ ನಿರ್ವಹಣಾ ಮೊಬಲಗು ಹಾಗೂ ಪರಿಹಾರದ ಮೊಬಲಗನ್ನು ಕಡಿಮೆ ಮಾಡಿರುತ್ತವೆ. ಪಿತ್ರಾರ್ಜಿತ ಸ್ವತ್ತಿರುವಂಥ ಕೃಷಿ ಸ್ವತ್ತನ್ನು ಈತ ಹೊಂದಿದ್ದು, ಈತ ಬಡ್ಡಿ ವ್ಯವಹಾರ, ರೇಷ್ಮೆ ಕೃಷಿ ಹಾಗೂ ಹೈನು ವ್ಯವಹಾರಗಳಲ್ಲಿ ನಿರತರಾಗಿರುತ್ತಾನೆಂದೂ ನಿವೇದಿಸಿಕೊಂಡಿರುತ್ತಾರೆ. ಈತನ ಇಬ್ಬರು ಗಂಡು ಮಕ್ಕಳು ಕೆಲಸ ಮಾಡುತ್ತಿದ್ದು, ಈತನ ಪತ್ನಿಯೂ ದುಡಿಯುವ ಮಹಿಳೆಯೇ ಆಗಿದ್ದು, ಈತನ ಕುಟುಂಬದ ವರಮಾನ ಮಾಸಿಕ 1 ಲಕ್ಷ ರೂ.ಗಳಿಗಿಂತ ಕಡಿಮೆಯಿರುವುದಿಲ್ಲ. ಈತ ತನ್ನ ಪತ್ನಿಗೆ ಯಾವುದೇ ಜೀವನಾಂಶವನ್ನು ನೀಡದೆ ತನ್ನ ಎರಡನೇ ಹೆಂಡತಿ ಹಾಗೂ ಮಕ್ಕಳೊಂದಿಗೆ ಅತ್ಯಂತ ಐಷಾರಾಮಿ ಬದುಕನ್ನೇ ನಡೆಸುತ್ತಿದ್ದಾನೆ. ತನ್ನ ವೈವಾಹಿಕ ಜೀವನದ ನಿರ್ವಹಣೆಯ ಸಂದರ್ಭದಲ್ಲೇ, ಈತ ಕಾನೂನುಬಾಹಿರವಾಗಿ ಸೇವಾ ವಹಿಯಲ್ಲಿ ದಾಖಲಾಗಿರುವಂತೆ ಬಸವಣ್ಣೆಮ್ಮಳನ್ನು ವಿವಾಹ ಮಾಡಿಕೊಂಡಿರುತ್ತಾನೆಂದೂ ನಿವೇದಿಸಿಕೊಂಡಿರುತ್ತಾರೆ. ಅರ್ಜಿದಾರನು ಮತ್ತೊಬ್ಬ ಮಹಿಳೆಯೊಂದಿಗೆ ವಾಸಿಸುತ್ತಿರುವುದರಿಂದ, ಆಕೆ ವಾಸಿಸಲು ಇಚ್ಛಿಸುವಂಥ ಪ್ರತ್ಯೇಕ ನಿವಾಸಿ ಮನೆ ಅಥವಾ ಬಾಡಿಗೆ ಸಂದಾಯ ಮಾಡಿ ಪ್ರತ್ಯೇಕ ಮನೆಯನ್ನು

ಪಡೆದುಕೊಳ್ಳಲು ಹಕ್ಕುಳ್ಳವಳಾಗಿದ್ದಾಳೆ. ಈವರೆಗೆ ಆಕೆಗೆ ಯಾವುದೇ ಪ್ರತ್ಯೇಕ ನಿವಾಸದ ವ್ಯವಸ್ಥೆಯನ್ನು ಮಾಡಲಾಗಿಲ್ಲ. ಆಕೆಯ ವಿವಾಹಿತ ಮಗಳೂ ತನ್ನ ಗಂಡನಿಂದ ಪರಿತ್ಯಕ್ತಳಾಗಿರುತ್ತಾಳೆ. ಹಾಗಾಗಿ, ಆಕೆಯಿಂದ ತಾಯಿಯನ್ನು ಸಾಕಬೇಕೆಂದು ನಿರೀಕ್ಷಿಸಲು ಸಾಧ್ಯವಿರುವುದಿಲ್ಲ. ಈಕೆಗೆ ಪ್ರತೀ ತಿಂಗಳು ತನ್ನ ಊಟ, ಬಟ್ಟೆ ಹಾಗೂ ವೈದ್ಯಕೀಯ ವೆಚ್ ಗಳಿಗೆ 20,000/- ರೂ.ಗಳ ಅವಶ್ಯಕತೆಯಿದ್ದು, ಈಕೆ ಅನಾರೋಗ್ಯದಿಂದ ಬಳಲುತಿದ್ದು, ಅಧೀನ ಅಪೀಲು ನ್ಯಾಯಾಲಯದ ಆದೇಶವನ್ನು ಯುಕ್ತ ಮೊಬಲಗಿನ ಮೂಲಕ ನಿರ್ವಹಣಾ ಮೊಬಲಗು ಹಾಗೂ ಪರಿಹಾರದ ಮೊಬಲಗನ್ನು ಹೆಚ್ಚಿಸುವ ಮೂಲಕ ಮಾರ್ಪಾಟುಗೊಳಿಸಬಹುದಾಗಿರುತ್ತದೆ.

10. ಅಧೀನ ನ್ಯಾಯಾಲಯದ ದಾಖಲೆಗಳೊಂದಿಗೆ ಅಧೀನ ನ್ಯಾಯಾಲಯಗಳ ತೀರ್ಪುಗಳ ಪುನರವಲೋಕನ ಕುರಿತು ಹಾಗೂ ಮೇಲಿನ ಪ್ರತಿ ನಿವೇದನೆಗಳೊಂದಿಗೆ, ಪರಿಗಣನೆಗಾಗಿ ಈ ಮುಂದಿನ ಅಂಶಗಳು ಉದ್ಭವವಾಗಿರುತ್ತವೆ:

1) ಪತ್ನಿಯು ಸಲ್ಲಿಸಿರುವ ಅರ್ಜಿಯು ಕಾಲಪರಿಮಿತಿಯಿಂದ ನಿಷೇಧಿತವಾಗಿದೆಯೇ?

2) ಅದು ನಕಾರಾತ್ಮಕವಾಗಿದ್ದಲ್ಲಿ, ಆಕೆಗೆ ಯುಕ್ತವಾಗಿ ನೀಡಬೇಕಾದ ಜೀವನಾಂಶದ ಮೊಬಲಗು ಎಷ್ಟು?

11. ಪಕ್ಷಕಾರರ ನಡುವಿನ ಸಂಬಂಧದಂಥ ವಾಸ್ತವಿಕ ಆಯಾಮಗಳು, ಪತಿಯ ಎರಡನೇ ವಿವಾಹ ಹಾಗೂ ಪ್ರಸ್ತುತ ನಿವೃತ್ತ ನೌಕರನ ಸ್ಥಿತಿಗತಿ ಎಲ್ಲವೂ ಪಕ್ಷಕಾರರ ನಡುವಿನ ಒಪ್ಪಿತ ವಿಚಾರಗಳಾಗಿವೆ. ಕಾಲಪರಿಮಿತಿಗೆ ಸಂಬಂಧಿಸಿದಂತೆ ಪತಿಯ ಪರ ಪ್ರಸ್ತಾಪಿಸಲಾದ ಕಾನೂನಾತ್ಮಕ ವಾದವನ್ನು

ಪುಷ್ಟೀಕರಿಸಲು, ***ಇಂದ್ರಜಿತ್ ಸಿಂಗ್ ಗ್ರೇವಾಲ್ -ವಿರುದ್ಧ- ಪಂಜಾಬ್ ರಾಜ್ಯ ಹಾಗೂ ಮತ್ತೊಬ್ಬರು*** [1] ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಪತಿಯು ಉದಾಹರಿಸಿರುತ್ತಾನೆ. ಸದರಿ ಪ್ರಕರಣದಲ್ಲಿ ಒಳಗೊಂಡ ವಾಸ್ತವಾಂಶಗಳೆಂದರೆ, ಅಧಿನಿಯಮದ ಉಪಬಂಧಗಳಡಿಯಲ್ಲಿ ಪತ್ನಿ ಅರ್ಜಿಯನ್ನು ಸಲ್ಲಿಸಿರುತ್ತಾಳೆ. ಪಕ್ಷಕಾರರು ಪಡೆದುಕೊಂಡ ವಿಚ್ಛೇದನದ ಡಿಕ್ರಿಯು ಕಪಟದ ವ್ಯವಹರಣೆಯೆಂದೂ ಆಪಾದಿಸಲಾಗಿದ್ದು, ವಿಚ್ಛೇದನವನ್ನು ಪಡೆದುಕೊಂಡ ತರುವಾಯ ಕೂಡ, ಪಕ್ಷಕಾರರು ಪತಿ-ಪತ್ನಿಯರಂತೆಯೇ ಒಟ್ಟಿಗೆ ಸಂಸಾರ ಮಾಡುತ್ತಿರುತ್ತಾರೆ. ಆ ತರುವಾಯ ಆಕೆಯನ್ನು ಗಂಡನ ಮನೆಯಿಂದ ಬಲವಂತವಾಗಿ ಹೊರನಡೆಸಿರುತ್ತಾರೆ. ಸರ್ವೋಚ್ಚ ನ್ಯಾಯಾಲಯವು ಪತಿಯು ಮಂಡಿಸಿದ ವಾದವನ್ನು ಎತ್ತಿಹಿಡಿದಿರುತ್ತದೆ ಹಾಗೂ ದಂಡ ಪ್ರಕ್ರಿಯಾ ಸಂಹಿತೆಯ 468ನೇ ಪ್ರಕರಣದ ಉಪಬಂಧಗಳ ಹಿನ್ನಲೆಯಲ್ಲಿ ಘಟನೆ ನಡೆದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಮಾತ್ರ ದೂರನ್ನು ದಾಖಲಿಸಬಹುದು ಎಂದು ಅಭಿಪ್ರಾಯಪಡಲಾಗಿರುತ್ತದೆ. ದಂಡ ಪ್ರಕ್ರಿಯೆಯ ಸೂಕ್ತ ಭಾಗವನ್ನು ಈ ಮುಂದಿನಂತೆ ಓದಲಾಗಿರುತ್ತದೆ:

> *"24. ದಂಡ ಪ್ರಕ್ರಿಯಾ ಸಂಹಿತೆಯ 468ನೇ ಪ್ರಕರಣದ ಉಪಬಂಧದ ಹಿನ್ನೆಲೆಯಲ್ಲಿ ಕಾಲ ಪರಿಮಿತಿಯ ವಿವಾದದ ಮೇಲೆ ಶ್ರೀ ರಂಜಿತ್ ಕುಮಾರ್ ರವರು ಮಾಡಿದ ನಿವೇದನೆಗಳೆಂದರೆ, ಗೃಹ ಸಂಬಂಧಿ ಹಿಂಸೆಗಳಿಂದ ಮಹಿಳೆಯನ್ನು ಸಂರಕ್ಷಿಸುವ ನಿಯಮಗಳು, 2006ರ 15(6)ನೇ ನಿಯಮದೊಂದಿಗೆ ಓದಿದ 2005ರ ಅಧಿನಿಯಮದ 28 ಹಾಗೂ 32ನೇ ಪ್ರಕರಣಗಳ ಉಪಬಂಧಗಳ ಹಿನ್ನೆಲೆಯಲ್ಲಿ ಪ್ರಮುಖವೆಂದು ಕಂಡು ಬರುವ ಘಟನೆಯ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಮಾತ್ರ ದೂರನ್ನು ಸಲ್ಲಿಸಬಹುದು" ಎಂಬುದಾಗಿರುತ್ತದೆ.*

1. (2011) 12 ಎಸ್‌ಸಿಸಿ 588

12. ಪ್ರತಿಯಾಗಿ, ಪತಿ ಹಾಗೂ ಪತ್ನಿಯರು ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಒಂದೇ ಸೂರಿನಡಿ ವಾಸಿಸದಿದ್ದಾಗ್ಯೂ, ಪತ್ನಿ, ಅಧಿನಿಯಮದ 12ನೇ ಪ್ರಕರಣದಡಿಯಲ್ಲಿ ತನ್ನ ಪರಿಹಾರವನ್ನು ಕೋರಲು ಹಕ್ಕುಳ್ಳವಳಾಗಿರುತ್ತಾಳೆಂದು ***ವಿ.ಡಿ. ಭನೋಟ್ –ವಿರುದ್ಧ– ಸವಿತ ಭನೋಟ್*** [2] ಪ್ರಕರಣದಲ್ಲಿ ತೀರ್ಪನ್ನು ಕುರಿತಂತೆ ಅರ್ಜಿದಾರ/ಪತ್ನಿಯ ಪರ ಮಾನ್ಯ ವಕೀಲರು ತಮ್ಮ ವಾದವನ್ನು ಮಂಡಿಸಿರುತ್ತಾರೆ.

13. ***ಇಂದ್ರಜಿತ್ ಸಿಂಗ್ ಗ್ರೇವಾಲ್*** (ಹಿಂದೆ ಹೇಳಿದ) ಪ್ರಕರಣದಲ್ಲಿ, ವ್ಯಾಜ್ಯ ಕಾರಣವು ದಿನಾಂಕ 5.4.2009ರಂದು ಸಮ್ಮತವಿರುವ ವಿಚ್ಛೇದನ ಡಿಕ್ರಿಯನ್ನು ಪಡೆದ ತರುವಾಯ ಕೂಡ, ಪಕ್ಷಕಾರರು ಒಟ್ಟಿಗೆ ಇದ್ದರೆಂದೂ, ಆ ತರುವಾಯ ಪತ್ನಿಗೆ ತನ್ನ ಪತಿಯ ಮನೆಯಿಂದ ಹೋಗಲು ಒತ್ತಾಯಿಸಲಾಗಿರುತ್ತದೆಂದು ಹೇಳಲಾಗಿರುತ್ತದೆ. ಆ ಸಂದರ್ಭದಲ್ಲಿ, ಸರ್ವೋಚ್ಚ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 468ನೇ ಪ್ರಕರಣದ ಹಿನ್ನೆಲೆಯಲ್ಲಿ, ಗೃಹ ಸಂಬಂಧಿ ಹಿಂಸೆಯಿಂದ ಮಹಿಳೆಯರನ್ನು ಸಂರಕ್ಷಿಸುವ ನಿಯಮ, 2006ರ 15(6)ನೇ ನಿಯಮದೊಂದಿಗೆ ಓದಲಾದ ಅಧಿನಿಯಮದ 28 ಹಾಗೂ 32ನೇ ಪ್ರಕರಣಗಳ ಉಪಬಂಧಗಳ ದೃಷ್ಟಿಯಲ್ಲಿ ಘಟನೆಯ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಮಾತ್ರ ದೂರನ್ನು ಸಲ್ಲಿಸಬಹುದಾಗಿರುತ್ತದೆಂಬ ನಿವೇದನೆಗಳೊಂದಿಗೆ ಭಿನ್ನತೆಯನ್ನು ಎಣಿಸುವುದಿಲ್ಲ.

ಅಧಿನಿಯಮದಡಿಯಲ್ಲಿ ಪರಿಹಾರ ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 468ನೇ ಪ್ರಕರಣದ ಅನ್ವಯತೆಗೆ ಸಂಬಂಧಿಸಿದಂತೆ ಭಾರತ ಸಂವಿಧಾನದ 141ನೇ ಅನುಚ್ಛೇದದಡಿಯಲ್ಲಿ ಸರ್ವೋಚ್ಚ ನ್ಯಾಯಾಲಯವು ತನ್ನ ಅಧಿಕಾರವನ್ನು ಚಲಾಯಿಸಿ ಅದು ಯಾವುದೇ ಕಾನೂನನ್ನು ಬಂಧನಕಾರಿ ತತ್ವದಂತೆ ವಿಧಿಸುವುದಿಲ್ಲ. ನಿರ್ಧಾರವು ವಾಸ್ತವವಾಗಿ ಏನನ್ನು ನಿರ್ಧರಿಸುತ್ತದೆಂಬುದರ ಪ್ರಾಧಿಕಾರವೇ ಆಗಿರುತ್ತದೆ ಎಂಬುದು

2. 2012 ಎಐಆರ್ ಎಸ್‌ಸಿಡಬ್ಲ್ಯೂ 1515

ಇತ್ಯರ್ಥಗೊಂಡ ವಿಚಾರವಾಗಿರುತ್ತದೆ. ನಿರ್ಣಯದಲ್ಲಿನ ತಿರುಳಿನಲ್ಲಿರುವುದೇ ಇದರ ಅನುಪಾತವಾಗಿದ್ದು ಅದರಲ್ಲಿ ಪ್ರತಿಯೊಂದು ಅಭಿಪ್ರಾಯವು ಅದರಲ್ಲಿ ರೂಪಿಸಿದ ಬೇರೆ ಬೇರೆ ಅಭಿಪ್ರಾಯಗಳಿಂದ ಅದರಲ್ಲಿನ ಪ್ರತಿಯೊಂದು ಅಭಿಪ್ರಾಯವನ್ನು ಕಂಡು ಕೊಳ್ಳಲಾಗಿರುವುದಿಲ್ಲ ಇಲ್ಲವೆ ತಾರ್ಕಿಕವಾಗಿ ಅನುಸರಿಸಲಾಗುವುದಿಲ್ಲ. (*ಆರ್.ಎಲ್. ಜೈನ್ –ವಿರುದ್ಧ– ಡಿಡಿಎ ಹಾಗೂ ಇತರರು*) (*ಕೃಷ್ಣ ಕುಮಾರ್ –ವಿರುದ್ಧ– ಭಾರತ ಒಕ್ಕೂಟ, ದೆಹಲಿ ಪುರಸಭೆ –ವಿರುದ್ಧ– ಗುರ್‌ನಾಮ್ ಕೌರ್ ಹಾಗೂ ಓರಿಯಂಟಲ್ ಪೇಪರ್ ಹಾಗೂ ಇಂಡಸ್ಟ್ರೀಸ್ ಲಿ. –ವಿರುದ್ಧ– ಒರಿಸ್ಸಾ ಸರ್ಕಾರ*).

14. ಸರ್ವೋಚ್ಚ ನ್ಯಾಯಾಲಯವು ತರುವಾಯ ತೀರ್ಪು ನೀಡಿದಂಥ ***ವಿ.ಡಿ. ಭನೋಟ್ ಪ್ರಕರಣದಲ್ಲಿ*** (ಹಿಂದೆ ಹೇಳಿದ) ದೆಹಲಿ ಉಚ್ಚ ನ್ಯಾಯಾಲಯವು, ಆಕೆಯ ಪತಿಯೊಂದಿಗೆ ದೀರ್ಘಕಾಲದಿಂದ ವಾಸಿಸದಂಥ ಅಥವಾ 26.10.2006ರಂದು ಅಧಿನಿಯಮವು ಜಾರಿಗೆ ಬರುವುದಕ್ಕೆ ಮೊದಲು ಗೃಹ ಸಂಬಂಧಿ ಹಿಂಸೆಯ ಕೃತ್ಯಕ್ಕೆ ಆಪಾದಿಸಲಾದಂತೆ ಸಂಬಂಧಿಸಿದಂಥ ಮಹಿಳೆಯು ಸಲ್ಲಿಸಿದ ಅಧಿನಿಯಮದಡಿಯಲ್ಲಿನ ಅರ್ಜಿಯ ಊರ್ಜಿತತ್ವದ ಸಂಬಂಧದಲ್ಲಿ ತನ್ನ ಅಭಿಪ್ರಾಯವನ್ನು ದಾಖಲಿಸಿರುತ್ತದೆ. ಸಂವಿಧಾನದ 21ನೇ ಅನುಚ್ಛೇದದಡಿಯಲ್ಲಿನ ಸಂವಿಧಾನಾತ್ಮಕ ಸುರಕ್ಷತೆಗಳನ್ನು ಪರಿಗಣಿಸಿದ ತರುವಾಯ ಅಧಿನಿಯಮದ 31 ಹಾಗೂ 33ನೇ ಪ್ರಕರಣಗಳ ಉಪಬಂಧಗಳಿಗೆ ಪ್ರತಿಯಾಗಿ ದೆಹಲಿ ಉಚ್ಚ ನ್ಯಾಯಾಲಯದ ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರು, ಸಂವಿಧಾನದ 14, 15 ಹಾಗೂ 21ನೇ ಅನುಚ್ಛೇದಗಳಡಿಯಲ್ಲಿ ಮಹಿಳೆಯರ ಹಕ್ಕುಗಳನ್ನು ಸಂರಕ್ಷಿಸುವ ದೃಷ್ಟಿಯೊಂದಿಗೆ ಸಂಸತ್ತು, ಕುಟುಂಬದೊಳಗೆ ಉಂಟಾಗುವ ಯಾವುದೇ ರೀತಿಯ ಹಿಂಸೆ ಹಾಗೂ ಅದಕ್ಕೆ ಸಂಬಂಧಿಸಿದ ಹಾಗೂ ಅದಕ್ಕೆ ಆನುಷಂಗಿಕವಾದ ವಿಷಯಗಳೊಳಗೆ ಉಂಟಾಗುವ ಯಾವುದೇ ರೀತಿಯ ಹಿಂಸೆಗೆ ಬಲಿಯಾದಂಥ ಮಹಿಳೆಯರಿಗೆ ಸಂವಿಧಾನದಡಿಯಲ್ಲಿ ನೀಡಿದ ಹಕ್ಕುಗಳು ಸ್ವಲ್ಪಮಟ್ಟಿನ ಪರಿಣಾಮಕಾರಿ

ಸಂರಕ್ಷಣೆ ನೀಡುವ ದೃಷ್ಟಿಯಲ್ಲಿ ಹಾಗೂ ಅವರಿಗೆ ಸಮರ್ಥವಾದ ಹಾಗೂ ವಿಹಿತವಾದ ನಾಗರಿಕ ಪರಿಹಾರವನ್ನು ನೀಡಲು ಅಧಿನಿಯುಮವನ್ನು ಅಧಿನಿಯಮಿತಗೊಳಿಸಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ. ತದನುಸಾರವಾಗಿ, ಅಧಿನಿಯಮದ ಉಪಬಂಧಗಳಡಿಯಲ್ಲಿನ ಅರ್ಜಿಯು, ಹಿಂದೆ ಅಧಿನಿಯಮ ಜಾರಿಗೆ ಬರುವ ಮೊದಲು ಒಂದೇ ಸೂರಿನಡಿಯಲ್ಲಿ ಆಕೆ ತನ್ನ ಪತಿಯೊಡನೆ ಸಂಸಾರ ಮಾಡಿರಲಿ ಇಲ್ಲವೇ ಅಧಿನಿಯಮ ಜಾರಿಗೆ ಬರುವ ಸಮಯದಲ್ಲಿ ಅವರಿಬ್ಬರು ಬೇರೆಯಾಗಿರಲಿ ಅಧಿನಿಯಮ ಜಾರಿಗೆ ಬರುವ ಮೊದಲು ಗೃಹ ಸಂಬಂಧಿ ಹಿಂಸೆಗಳನ್ನು ಎಸಗಿದ್ದಲ್ಲಿ ಕೂಡ ಊರ್ಜಿತವಾಗಿರುತ್ತದೆ. ಸದರಿ ನಿರ್ಣಯವನ್ನು ಈ ಮುಂದಿನ ಮಾತುಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ದೃಢೀಕರಿಸಿರುತ್ತದೆ. *“ನಮ್ಮ ದೃಷ್ಟಿಯಲ್ಲಿ, ದೆಹಲಿ ಉಚ್ಚ ನ್ಯಾಯಾಲಯವು, ಈ ಹಿಂದೆ ಅಧಿನಿಯಮ ಜಾರಿಗೆ ಬರುವ ಮೊದಲು ಒಂದೇ ಸೂರಿನಡಿಯಲ್ಲಿ ಆಕೆ ತನ್ನ ಪತಿಯೊಡನೆ ಸಂಸಾರ ಮಾಡಿರಲಿ ಇಲ್ಲವೇ ಅಧಿನಿಯಮ ಜಾರಿಗೆ ಬರುವ ಸಮಯದಲ್ಲಿ ಅವರಿಬ್ಬರು ಬೇರೆಯಾಗಿರಲಿ ಅಧಿನಿಯಮ ಜಾರಿಗೆ ಬರುವ ಮೊದಲು ಗೃಹ ಸಂಬಂಧಿ ಹಿಂಸೆಗಳನ್ನು ಎಸಗಿದ್ದಲ್ಲಿ ಆಗ ಅಧಿನಿಯಮದ ಸಂರಕ್ಷಣೆಗೆ ಹಕ್ಕುಳ್ಳವರಾಗಿರುತ್ತಾರೆಂದು ಅಭಿಪ್ರಾಯಪಟ್ಟಿರುವುದು ಸಮುಚಿತವಾದುದಾಗಿರುತ್ತದೆ”.*

15. ಪತಿಯು ಪ್ರಸ್ತಾಪಿಸಿದ ಕಾಲಪರಿಮಿತಿಯ ಪ್ರಶ್ನೆಯನ್ನು, ಪ್ರತ್ಯೇಕವಾಗಿ ದಶಕಗಳೇ ಕಳೆದ ತರುವಾಯ ಪತ್ನಿ ಅರ್ಜಿಯನ್ನು ಸಲ್ಲಿಸಿದ್ದಾಳೆಂಬ ಮುಖ್ಯ ಅಂಶವನ್ನು ಯಾಂತ್ರಿಕವಾಗಿ ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಮೇಲೆ ಅಭಿಪ್ರಾಯಪಟ್ಟಂತೆ, ಕಾಲ ಪರಿಮಿತಿಯ ಪ್ರಶ್ನೆಯನ್ನು ‘ಗೃಹ ಸಂಬಂಧಿ ಹಿಂಸೆ’ಯ ಒಂದೇ ಘಟನೆಯಿಂದ ಉದ್ಭವಿಸಿದ ವ್ಯಾಜ್ಯ ಕಾರಣದ ಉಲ್ಲೇಖದಲ್ಲಿ ***ಇಂದ್ರಜಿತ್ ಸಿಂಗ್ ಗ್ರೇವಾಲ್*** ಪ್ರಕರಣದಲ್ಲಿ ಅನ್ವಯವಾಗುವಂತೆ ಮಾಡಲಾಗಿದ್ದು, ಆ ಪ್ರಕರಣದಲ್ಲಿ ದಿನಾಂಕ 20.3.2005ರಂದು ಕೌಟುಂಬಿಕ ನ್ಯಾಯಾಲಯದ ಆದೇಶದ ಮೇರೆಗೆ ವಿಚ್ಛೇದನದ ಡಿಕ್ರಿಯನ್ನು ಪಡೆದಿದ್ದರೂ ಕೂಡ ಒಂದೇ ಸೂರಿನಡಿ ಪಕ್ಷಕಾರರು ವಾಸಿಸಲು ಆರಂಭಿಸಿದ ತರುವಾಯ ಪತಿಯ ಮನೆಯನ್ನು ತೊರೆಯಲು

ಪತ್ನಿಗೆ ಒತ್ತಾಯಿಸಲಾಗಿರುತ್ತದೆ. ಇಲ್ಲಿನ ಪಕ್ಷಕಾರರು ಕಾನೂನುಬದ್ಧವಾಗಿ ವಿವಾಹಿತವಾದ ಜೋಡಿಯಾಗಿರುತ್ತದೆ. ವಿವಾಹದಿಂದ ಉದ್ಭವಿಸುವ ವೈವಾಹಿಕ ಹೊಣೆಗಾರಿಕೆಗಳನ್ನು ಪರಸ್ಪರ ಪೂರೈಸಿಕೊಳ್ಳುವುದು ಅಗತ್ಯವಾಗಿರುತ್ತದೆ. ಪತ್ನಿಯನ್ನು ಸಾಕ್ಷ್ಯವಾಗಿ ಪಾಟೀ – ಸವಾಲು ಮಾಡುವಾಗ, ಆಕೆ ವಿವಾಹವಾದ ತರುವಾಯ ಪತಿಯ ಮನೆಯಲ್ಲಿ ಒಂದು ವರ್ಷ ಇದ್ದುದಾಗಿ, ಕಳೆದ 8–9 ವರ್ಷಗಳಿಂದ ಬೆಂಗಳೂರಿನಲ್ಲಿರುವ ತನ್ನ ಮಗಳ ಮನೆಯಲ್ಲಿ ನೆಲೆಸಿರುವುದಾಗಿ ತಿಳಿದುಬಂದಿರುತ್ತದೆ. ಅಲ್ಲದೆ ತನ್ನ ಮಗಳ ವಿವಾಹವನ್ನು ತನ್ನ ಪತಿಯೇ ಮಾಡಿದುದಾಗಿಯೂ ಹಾಗೂ ಸೌಂದತ್ತಿಯಲ್ಲಿ ತನಗಾಗಿ ಪ್ರತ್ಯೇಕ ಮನೆಯನ್ನು ವ್ಯವಸ್ಥೆ ಮಾಡಿದರೂ ಸಹ ತಾನು ಆತನೊಂದಿಗೆ ಇರಲು ಸಿದ್ಧಳಿರಲಿಲ್ಲವೆಂದೂ ತಿಳಿಸಿರುತ್ತಾಳೆ. ಪತಿಯ ಸಾಕ್ಷ್ಯದ ಸಮಯದಲ್ಲಿ ಆತ ಪತ್ನಿ ತಾನಾಗಿಯೇ ತನ್ನ ಮನೆಯನ್ನು ತ್ಯಜಿಸಿ ಹೋದಳೆಂದು ತಿಳಿಸಿರುತ್ತಾನೆ. ಆತನ ಪಾಟೀ ಸವಾಲಿನ ಸಮಯದಲ್ಲಿ, ಆತ ತನ್ನ ಪತ್ನಿಯೊಂದಿಗೆ ಆತನ ವಿವಾಹ ಅಸ್ತಿತ್ವದಲ್ಲಿರುವಾಗಲೇ, ತಾನು ಮತ್ತೊಂದು ವಿವಾಹವಾದುದಾಗಿಯೂ, ಹಾಗೂ ತಾನು ಆಕೆಗೆ ಯಾವುದೇ ಜೀವನಾಂಶವನ್ನು ನೀಡಿರುವುದಿಲ್ಲವೆಂದೂ ಮುಚ್ಚುಮರೆಯಿಲ್ಲದೆ ಒಪ್ಪಿಕೊಂಡಿರುತ್ತಾನೆ. ಈತ ಎರಡನೇ ಪತ್ನಿಯನ್ನೇ ತನ್ನ ಪತ್ನಿಯೆಂದು ಸೇವಾ ದಾಖಲೆಗಳಲ್ಲಿ ನಾಮನಿರ್ದೇಶನ ಮಾಡಿರುತ್ತಾನೆ. ಈತನಿಗೆ ಸೌಂದತ್ತಿಯಲ್ಲಿ ಮನೆ ಹಾಗೂ ಜಮೀನು ಇದ್ದು, ಸದರಿ ಸ್ಥಳದಲ್ಲಿ ಈಕೆಯೊಂದಿಗೆ ಸಂಸಾರ ನಡೆಸಲು ಸಿದ್ಧನಿರುತ್ತಾನೆ. ಈತ 10 ಎಕರೆ ಜಮೀನನ್ನು ಹೊಂದಿದ್ದು, ಪ್ರತೀ ವರ್ಷ 2 ಬೆಳೆಗಳನ್ನು ಬೆಳೆಯುತ್ತಿರುತ್ತಾನೆ.

16. ಅಧಿನಿಯಮದ 3ನೇ ಪ್ರಕರಣದಡಿಯಲ್ಲಿನ 'ಗೃಹ ಸಂಬಂಧಿ ಹಿಂಸೆ'ಯು, ಇತರೆ ವಿಷಯಗಳೊಟ್ಟಿಗೆ 'ಹಣಕಾಸಿನ ದೌರ್ಜನ್ಯದ' ಆಯಾಮವನ್ನು ಸಹ ಪರಿಗಣಿಸುತ್ತದೆ. ಪ್ರಯೋಜನ ಪಡೆದುಕೊಳ್ಳಬಹುದಾಗಿದ್ದಂಥ ಬಾಧಿತ ವ್ಯಕ್ತಿಯ ಜೀವನ ನಿರ್ವಹಣೆಯ ಬಗೆಗೆ ನಿರ್ಲಕ್ಷ್ಯ ತೋರುವ ಪತಿಯ ಕರ್ತವ್ಯಲೋಪವು ಅಧಿನಿಯಮದ 3ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಬರುತ್ತದೆ. ಪತಿಯ ಹೊಣೆಗಾರಿಕೆ ವೈವಾಹಿಕ ಜೀವನದುದ್ದಕ್ಕೂ ಮುಂದುವರೆಯುತ್ತದೆ. ಹಾಗಾಗಿ

ಜೀವನ ನಿರ್ವಹಣೆಗೆ ಹಲವಾರು ವರ್ಷಗಳ ಕಾಲ ಹಣವನ್ನು ಪತ್ನಿ ಕ್ಲೇಮು ಮಾಡಿರುವುದಿಲ್ಲವೆಂಬ ಕಾರಣಕ್ಕೆ ಪತಿಗೆ ವಿನಾಯಿತಿಯಿರುವುದಿಲ್ಲ. ಅಲ್ಲದೆ ಈತ ತನ್ನ ವಿವಾಹವು ಅಸ್ತಿತ್ವದಲ್ಲಿರುವಾಗಲೇ ಮತ್ತೊಬ್ಬ ಮಹಿಳೆಯನ್ನು ವಿವಾಹವಾಗಿ ಮಕ್ಕಳನ್ನು ಪಡೆದುಕೊಂಡಿರುವುದು. ಅಧಿನಿಯಮದ 3(ಎ) ಪ್ರಕರಣವು ಪರಿಭಾಷಿಸಿರುವ ಭಾವನಾತ್ಮಕ ದೌರ್ಜನ್ಯಕ್ಕೆ ಕಾರಣವಾಗಿ, ಬಾಧಿತ ವ್ಯಕ್ತಿಯ ಮಾನಸಿಕ ಹಾಗೂ ದೈಹಿಕ ಸ್ಥಿತಿಯನ್ನು ಅಪಾಯಕ್ಕೆ ದೂಡಿರುತ್ತದೆಯೆಂಬುದು ವಾಸ್ತವ ವಿಚಾರವಾಗಿರುತ್ತದೆ. ಇದು ಅಧಿನಿಯಮದ 3(ಎ) ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಬರುವ ಗೃಹ ಸಂಬಂಧಿ ಹಿಂಸೆಯ ಮತ್ತೊಂದು ರೀತಿಯದಾಗಿರುತ್ತದೆ. ವಿಷಯದ ಈ ಹಿನ್ನಲೆಯಲ್ಲಿ ಅರ್ಜಿದಾರನು ಗೃಹಸಂಬಂಧಿ ಹಿಂಸೆಯ ಅಪರಾಧದ ದೋಷಿಯಾಗಿದ್ದು, ತನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಕಾಲ ಪರಿಮಿತಿಯು ಅವಕಾಶ ನೀಡುವುದಿಲ್ಲ. ಆದ್ದರಿಂದ, ಪತ್ನಿಯು ಅಧಿನಿಯಮದಡಿ ರಕ್ಷಣೆಗೆ ಹಕ್ಕುಳ್ಳವಳಾಗಿರುತ್ತಾಳೆ.

17. ಕಾರ್ಯ ವಿಧಾನದ ಅನಿಯತತೆಗೆ ಸಂಬಂಧಿಸಿದಂತೆ ಪತಿಯು ಎತ್ತಿರುವ ಆಕ್ಷೇಪಣೆ ಕುರಿತಂತೆ – ವಿಷಯದ ಕಾರ್ಯ ವಿಧಾನದ ಆಯಾಮವನ್ನು ಅಧಿನಿಯಮದ IVನೇ ಅಧ್ಯಾಯದ 12 ರಿಂದ 29ನೇ ಪ್ರಕರಣಗಳು ವಿವರಿಸುತ್ತವೆ. ಪ್ರತಿಯೊಂದು ಶಾಸನಬದ್ಧ ಉಪಬಂಧಗಳನ್ನು ಪುನರುಚ್ಚರಿಸಿದೆ, ಅಧಿನಿಯಮದ ಉಪಬಂಧಗಳಿಂದ/ ಪ್ರಯೋಜನಕಾರಿ ಶಾಸನ ರಚನೆಯಿಂದ ಪಡೆದ ತಿಳುವಳಿಕೆಯೇ ಅಗತ್ಯತೆಗಳನ್ನು ಪೂರೈಸುತ್ತದೆ. ತದನುಸಾರವಾಗಿ, ಅಧಿನಿಯಮದ 12ನೇ ಪ್ರಕರಣದಡಿಯಲ್ಲಿನ ಬಾಧಿತ ವ್ಯಕ್ತಿಯು ಅಧಿನಿಯಮದಡಿಯಲ್ಲಿ ಒಂದು ಅಥವಾ ಹೆಚ್ಚಿನ ಪರಿಹಾರವನ್ನು ಕೋರಲು ಮ್ಯಾಜಿಸ್ಟ್ರೇಟರ ಎದುರು ಅರ್ಜಿಯನ್ನು ಸಲ್ಲಿಸಬಹುದು. 12ನೇ ಪ್ರಕರಣದ ಪರಂತುಕವು, ಅಂಥ ಅರ್ಜಿಯನ್ನು ಕುರಿತಂತೆ ಯಾವುದೇ ಆದೇಶವನ್ನು ಹೊರಡಿಸುವ ಮೊದಲು, ಮ್ಯಾಜಿಸ್ಟ್ರೇಟರು, ಸಂರಕ್ಷಣಾಧಿಕಾರಿ ಅಥವಾ ಸೇವೆಯನ್ನು ಒದಗಿಸುವುದರಿಂದ ತಾವು ಸ್ವೀಕರಿಸಿದ ಯಾವುದೇ ಗೃಹ ಸಂಬಂಧಿ ಘಟನೆಯ ವರದಿಯನ್ನು ಪರಿಗಣನೆಗೆ ತೆಗೆದುಕೊಳ್ಳಬಹುದೆಂದು ಉದ್ದೇಶಿಸಿರುತ್ತದೆ.

12ನೇ ಪ್ರಕರಣದ (4)ನೇ ಉಪ – ಪ್ರಕರಣದಡಿಯಲ್ಲಿ, ಮ್ಯಾಜಿಸ್ಟ್ರೇಟರು ಮೊದಲ ಸುನಾವಣಾ ದಿನಾಂಕವನ್ನು ನಿಗದಿಪಡಿಸಬಹುದಾಗಿದ್ದು, ಸಾಮಾನ್ಯವಾಗಿ ಇದು ನ್ಯಾಯಾಲಯವು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ದಿನಗಳನ್ನು ಮೀರಿರತಕ್ಕದ್ದಲ್ಲ. 13ನೇ ಪ್ರಕರಣದ (1)ನೇ ಉಪ–ಪ್ರಕರಣವು, ಎರಡು ದಿವಸಗಳ ಒಳಗೆ ಅಥವಾ ಮ್ಯಾಜಿಸ್ಟ್ರೇಟರು ಅಂಗೀಕರಿಸಬಹುದಾದ ತರುವಾಯದ ಯುಕ್ತ ಕಾಲಾವಧಿಯ ಒಳಗೆ ಪ್ರತ್ಯರ್ಜಿದಾರರಿಗೆ ಸೇವೆಯನ್ನು ನೀಡತಕ್ಕಂಥ ಸಂರಕ್ಷಣಾಧಿಕಾರಿಗೆ 12ನೇ ಪ್ರಕರಣದಡಿಯಲ್ಲಿ ನಿಗದಿಪಡಿಸಿದ ಸುನಾವಣೆಯ ದಿನಾಂಕವನ್ನು ಗೊತ್ತುಪಡಿಸಲು ಉದ್ದೇಶಿಸಿರುತ್ತದೆ. ಈ ನ್ಯಾಯಾಲಯದ ಅಭಿಪ್ರಾಯದಲ್ಲಿ ಸಂರಕ್ಷಣಾಧಿಕಾರಿಯಿಂದ ವರದಿಯನ್ನು ತರಿಸಿಕೊಳ್ಳುವ ಕಾರ್ಯ ವಿಧಾನವನ್ನು, ಏಕಪಕ್ಷೀಯ ಆದೇಶವನ್ನು ಹೊರಡಿಸುವುದಕ್ಕೆ ಮೊದಲು ಅನುಸರಿಸಬೇಕೇ ಹೊರತು ಪ್ರತ್ಯರ್ಜಿದಾರರಿಗೆ ನೋಟೀಸನ್ನು ನೀಡಿದ ತರುವಾಯ ಅಲ್ಲ. ಒಮ್ಮೆ ಪ್ರತ್ಯರ್ಜಿದಾರರು ಹಾಜರಾದಲ್ಲಿ, ಮ್ಯಾಜಿಸ್ಟ್ರೇಟರು ಪಕ್ಷಕಾರರನ್ನು ಸಮಾಲೋಚನೆಗೆ ನಿರ್ದೇಶಿಸಬಹುದು ಅಥವಾ ಅಧಿನಿಯಮದ 15ನೇ ಪ್ರಕರಣದಡಿಯಲ್ಲಿ ತಜ್ಞರ ಸೇವೆಯನ್ನು ಪಡೆದುಕೊಳ್ಳಲು ನಿರ್ದೇಶಿಸಬಹುದು. ಪ್ರಕರಣವು ಪೂರ್ಣ ಪ್ರಮಾಣದ ಅಧಿವಿಚಾರಣೆಗೆ ಒಳಪಡುವುದರಿಂದ, ಗೃಹ ಸಂಬಂಧಿ ಘಟನೆ ವರದಿಯನ್ನು ನ್ಯಾಯಾಲಯ ಮುಂತಾದವುಗಳಿಂದ ತರಿಸಿಕೊಳ್ಳಲೇಬೇಕೆಂಬ ಆಯಾಮದ ಕಾರ್ಯವಿಧಾನದ ಮೇಲೆ ಉದ್ಭವಿಸುವ ಆಕ್ಷೇಪಣೆಯು ಊರ್ಜಿತವಾಗುವುದಿಲ್ಲ.

18. ಈಗ ಜೀವನಾಂಶ ನೀಡುವ ಪ್ರಮಾಣದ ಪ್ರಶ್ನೆಯನ್ನು ವಿಶ್ಲೇಷಿಸೋಣ. ಅಧಿವಿಚಾರಣಾ ನ್ಯಾಯಾಲಯವು, ಪತಿಯು ಸೂಕ್ತ ಕಾಲಾವಧಿಯಲ್ಲಿ 22,312 ರೂ.ಗಳ ನಿವ್ವಳ ವೇತನವನ್ನು ಪಡೆಯುತ್ತಿದ್ದು, ತನ್ನ ಸೇವಾ ವಹಿಯಲ್ಲಿ ತನ್ನ ಎರಡನೇ ಪತ್ನಿಯನ್ನು ನಾಮ ನಿರ್ದೇಶನ ಮಾಡಿರುತ್ತಾನೆ. ಹಾಗೂ ಈತನ ಕುಟುಂಬವು 18 ಎಕರೆಗಳಷ್ಟು ಜಮೀನನ್ನು ಹೊಂದಿರುತ್ತಾನೆ. ಹಾಗಾಗಿ ತಿಂಗಳಿಗೆ 10,000/– ರೂ.ಗಳ ಜೀವನಾಂಶವನ್ನು ಹಾಗೂ 1,000 ರೂ.ಗಳಷ್ಟು

ಮುಂದುವರೆಸಬಹುದಾದ ವೆಚ್ಚದೊಂದಿಗೆ ಪ್ರತ್ಯೇಕ ಮನೆಯನ್ನು ವ್ಯವಸ್ಥೆ ಮಾಡಿಕೊಡುವ ತರುವಾಯದ ನಿರ್ದೇಶನದೊಂದಿಗೆ ಮಾನಸಿಕ, ಭಾವನಾತ್ಮಕ ಹಾಗೂ ಆರ್ಥಿಕವಾದ ಗೃಹ ಸಂಬಂಧಿ ಹಿಂಸೆಗೆ ಸಂಬಂಧಿಸಿದಂತೆ 1 ಲಕ್ಷ ರೂ.ಗಳ ಪರಿಹಾರವನ್ನು ನೀಡಬೇಕೆಂದು ತೀರ್ಪು ನೀಡಿರುತ್ತದೆ.

19. ಅಪೀಲಿನಲ್ಲಿ, ಅಧೀನ ಅಪೀಲು ನ್ಯಾಯಾಲಯವು, ಪತಿಯು 31.5.2016ರಂದು ನಿವೃತ್ತನಾಗಿದ್ದು, ಈತ ಪಿಂಚಣಿದಾರನಾಗಿದ್ದು, ಈತನು ನಿವೃತ್ತಿಯ ಸಮಯದಲ್ಲಿ ಸೌಲಭ್ಯವಾಗಿ 6,61,264ರೂ.ಗಳಷ್ಟು ಪಡೆದಿರುತ್ತಾನೆಂದೂ, ಹಾಗಾಗಿ ಮಾಸಿಕ ಜೀವನಾಂಶವನ್ನು 5,000/– ರೂ.ಗಳಿಗೂ ಪ್ರತ್ಯರ್ಜಿದಾರರಿಗೆ ಆಗಿರುವ ಮಾನಸಿಕ ಕ್ಷೋಭೆ ಹಾಗೂ ಸಾಂಗತ್ಯ ನಷ್ಟಕ್ಕೆ ಸಂಬಂಧಿಸಿದಂತೆ 50,000/– ರೂ.ಗಳ ಪರಿಹಾರವನ್ನು ನೀಡುವಂತೆ, ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಮಾರ್ಪಾಟು ಮಾಡಬೇಕೆಂದು ಅಭಿಪ್ರಾಯಪಟ್ಟಿರುತ್ತದೆ.

20. ಅಪೀಲು ನ್ಯಾಯಾಲಯವು ಪತ್ನಿಗೆ ಸೂರನ್ನು ನೀಡುವಂಥ ಯಾವುದೇ ನಿರ್ದೇಶನವನ್ನು ನೀಡಿರುವುದಿಲ್ಲ. ವ್ಯಾಜ್ಯ ಶೀರ್ಷಿಕೆ ವಿಳಾಸದ ಪ್ರಕಾರ, ಪತಿಯು ಸೌಂದತ್ತಿಯ ನಿವಾಸಿಯಾಗಿದ್ದು, ಗಗನಕ್ಕೇರಿರುವ ಬಾಡಿಗೆಯನ್ನು ನೀಡಿ ಬೆಂಗಳೂರಿನಲ್ಲಿ ಮನೆ ಮಾಡಿಕೊಡುವಂತೆ ನಿರೀಕ್ಷಿಸಲಾಗುವುದಿಲ್ಲ. ಪತ್ನಿಯು ಪತಿಯು ಸ್ವಗ್ರಾಮದಲ್ಲಿ ಆತನೊಂದಿಗೆ ವಾಸಿಸಲು ನಿರಾಕರಿಸಿರುತ್ತಾಳೆ. ಪತಿಗೆ ಕೃಷಿಯಿಂದ ಆದಾಯ ಹಾಗೂ ನಿವೃತ್ತಿವೇತನ ಬರುತ್ತಿರುವುದರಿಂದ ಪ್ರತೀ ತಿಂಗಳು ಆಕೆಯ ಜೀವನಾಂಶಕ್ಕೆ 5,000/– ರೂ.ಗಳನ್ನು ನೀಡುವುದು ಹಾಗೂ ಆಕೆ ಅನುಭವಿಸಿದ ಮಾನಸಿಕ ಕ್ಷೋಭೆಗೆ 50,000/– ರೂ.ಗಳನ್ನು ನೀಡುವುದು ತೊಂದರೆಯನ್ನು ಉಂಟು ಮಾಡುವುದಿಲ್ಲ. ಉಭಯ ಪಕ್ಷಕಾರರು ಸಲ್ಲಿಸಿರುವ ಪುನರವಲೋಕನ ಅರ್ಜಿಗಳು ಈ ನ್ಯಾಯಾಲಯದ ಪುನರವಲೋಕನದ ಅಧಿಕಾರ ವ್ಯಾಪ್ತಿಯೊಳಗೆ ಬರುವುದಿಲ್ಲವಾದ್ದರಿಂದ, ಅರ್ಜಿಗಳನ್ನು ವಜಾಗೊಳಿಸಲಾಗಿರುತ್ತದೆ.

---